# ಸಂಜಯ್, ಮಾಧುರಿ ಒಲವಿನ ನೆನಕೆ



ಒಂದು ಕಾಲವಿತ್ತು. ಮಾಧುರಿ ದೀಕ್ಷಿತ್ ಹಿಂದೆ ಸಂಜಯ್ ದತ್ ಓಡಾಡುತ್ತಲೇ ಇದ್ದರು. ಅವಕಾಶ ಸಿಕ್ಕಾಗಲೆಲ್ಲ ಮೆಲುದನಿಯಲ್ಲಿ ಐಲವ್‌ಯೂ ಎನ್ನುತ್ತಿದ್ದರು. ಮಾಧುರಿ ಮಾತ್ರ ಅದು ಒಲವು ಎಂದು ಒಮ್ಮೆಯೂ ಹೇಳಲಿಲ್ಲ. ಆದರೆ, ಸಂಜಯ್ ದತ್ ಸಜ್ಜನ ಎಂದು ಮಾತ್ರ ಅವರು ಪದೇ ಪದೇ ಹೇಳುತ್ತಿದ್ದರು. 1993ರಲ್ಲಿ 'ಸಾಹಿಬಾ' ಹಿಂದಿ ಸಿನಿಮಾ ಚಿತ್ರೀಕರಣ ಮೈಸೂರಿನಲ್ಲೂ ನಡೆದಿತ್ತು. ಅಲ್ಲಿಂದ ತಂಡ ಊರಿಗೆ ಸ್ಥಳಾಂತರಗೊಂಡು ಕೆಲವು ದೃಶ್ಯಗಳನ್ನು ಚಿತ್ರೀಕರಿಸಿತ್ತು. ಆ ಸಿನಿಮಾ ನಿರ್ದೇಶಕ ರಮೇಶ್ ತಲ್ವಾರ್ ಹಳೆಯ ನೆನಪನ್ನು ಇತ್ತೀಚೆಗೆ ಹಂಚಿಕೊಂಡರು. ಸಂಜಯ್ ಐ ಲವ್ ಯೂ ಎಂದು ಪಿಸುಗುಡುತ್ತಲೇ ಇದ್ದ ಆ ದಿನಮಾನವನ್ನು ಅನಾವರಣಗೊಳಿಸಿದ್ದು ಇದೇ ರಮೇಶ್.

ಜುಲೈ 29ರಂದು ಸಂಜಯ್ ದತ್ ಅವರಿಗೆ 66 ವರ್ಷ ತುಂಬಿತು. ಈ ಕಾಲಘಟ್ಟದಲ್ಲಿ ಮತ್ತೆ ಅವರ ಬದುಕಿನ ಹಳೆಯ ಪುಟಗಳನ್ನು ಅನೇಕರು ತಿರುವಿಹಾಕಿದರು. 'ಖತ್ರೋಂಕೆ ಖಿಲಾಡಿ', 'ಕಾನೂನ್ ಅಪ್ನಾ ಅಪ್ನಾ', 'ಠಾಣೆದಾರ್', 'ಸಾಜನ್', 'ಖಳನಾಯಕ್' ಹೀಗೆ ಸಾಲು ಸಾಲು ಸಿನಿಮಾಗಳಲ್ಲಿ ಸಂಜಯ್ ಹಾಗೂ ಮಾಧುರಿ ಜೋಡಿಯಾಗಿ ಅಭಿನಯಿಸಿದ್ದರು.



ರಿಚಾ ಶರ್ಮಾ ಅವರನ್ನು ಅದಾಗಲೇ ಮದುವೆಯಾಗಿದ್ದ ಸಂಜಯ್ ಬದುಕಿನಲ್ಲಿ ಹಲವು ಸಿಕ್ಕುಗಳು ಇದ್ದವು. ಕ್ಯಾನ್ಸರ್‌ನಿಂದ ಬಳಲುತ್ತಿದ್ದ ರಿಚಾ ಅವರಿಗೆ 1993ರಲ್ಲಿ ಸಂಜಯ್ ವಿಚ್ಛೇದನ ಕೋರಿ ನೋಟಿಸ್ ಕಳುಹಿಸಿದ್ದರು. ಆ ಕಾಲಘಟ್ಟದಲ್ಲಿ ಅವರಿಗೆ ಮಾಧುರಿ ಮೇಲೆ ಪ್ರೀತಿ ಹುಟ್ಟಿತ್ತು ಎಂದು ಆಪ್ತ ವಲಯದ ಅನೇಕರು ನೆನಪಿಸಿಕೊಳ್ಳುತ್ತಾರೆ.

ಮಾಧುರಿ ಪ್ರಕಾರ ಸಂಜಯ್ ಬದುಕಿನಲ್ಲಿ ಏನೇ ಆಗಿರಬಹುದು. ವಾಸ್ತವದಲ್ಲಿ ಅವರು ಸಜ್ಜನ. ವೃತ್ತಿಪರ. ತಮ್ಮ ಸಹವರ್ತಿಗಳಿಗೆ ಆತ್ಮವಿಶ್ವಾಸ ತುಂಬುತ್ತಾ ಮಾಡುವ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಾರೆ. ಎಲ್ಲರನ್ನೂ ಸುರಕ್ಷಿತ ವಲಯದಲ್ಲಿ ಇಡುತ್ತಾರೆ. ಇದನ್ನು ಹೊರತುಪಡಿಸಿ ಪ್ರೀತಿಯ ಕುರಿತು ಅವರು ಏನನ್ನೂ ಹೇಳಲಿಲ್ಲ.


1997ರಲ್ಲಿ ಮಹಾಂತಾ ಸಿನಿಮಾ ಬಂದ ಮೇಲೆ ಮಾಧುರಿ ಹಾಗೂ ಸಂಜಯ್ ಎರಡು ದಶಕ ಯಾವ ಸಿನಿಮಾಗಳಲ್ಲಿಯೂ ಒಟ್ಟಾಗಿ ಅಭಿನಯಿಸಲಿಲ್ಲ. ಆಮೇಲೆ ಕಳಂಕ್ ಚಿತ್ರದಲ್ಲಿ ಮತ್ತೆ ತೆರೆ ಹಂಚಿಕೊಂಡಿದ್ದರು. ಬದುಕಿನಲ್ಲಿ ಮೂರು ಮದುವೆಯಾಗಿ, ಅನೇಕ ಹೆಣ್ಣುಮಕ್ಕಳ ಜೊತೆ ಮಲಗಿದ್ದಾಗಿ ಮುಕ್ತವಾಗಿ ಹೇಳಿಕೊಳ್ಳುತ್ತಾ ಬಂದಿರುವ ಸಂಜಯ್ ದತ್ ಅವರಿಗೆ ಈಗ ದಕ್ಷಿಣ ಭಾರತದ ಸಿನಿಮಾಗಳಲ್ಲೂ ಬೇಡಿಕೆ ಇದೆ. ಕನ್ನಡದಲ್ಲಿ ಧ್ರುವ ಸರ್ಜಾ ನಟಿಸಿರುವ ಕೆ.ಡಿ. ಸಿನಿಮಾದಲ್ಲಿ ಅವರು ಪ್ರಮುಖ ಪಾತ್ರಧಾರಿ. ■

# ಕಾಜೋಲ್, ಟ್ವಿಂಕಲ್ ಟೂ ಮಚ್ ಮಾತು



ನಟಿ ಕಾಜೋಲ್ ಮತ್ತೆ ತೆರೆ ಮೇಲೆ ಪದೇ ಪದೇ ಕಾಣಿಸಿಕೊಳ್ಳಲು ಉತ್ಸುಕರಾಗಿದ್ದಾರೆ. 'ಮಾ' ಸಿನಿಮಾ ದೊಡ್ಡ ಹಿಟ್ ಆಗದೆ ಇದ್ದರೂ ಅವರಲ್ಲಿನ ಉತ್ಸಾಹ ಹಾಗೂ ನಟಿಯಾಗಿ ಅವರು ಮಾಗಿರುವ ವಿದ್ಯಮಾನವನ್ನು ಕಾಣಿಸಿದೆ. ಈಗ ಅವರು ಹಾಗೂ ಟ್ವಿಂಕಲ್ ಖನ್ನಾ ಸೇರಿ ಅಮೆಜಾನ್ ಪ್ರೈಮ್ ಒಟಿಟಿಗೆ 'ಟೂ ಮಚ್ ವಿತ್ ಕಾಜೋಲ್ ಆಂಡ್ ಟ್ವಿಂಕಲ್' ಎಂಬ ಸಂವಾದದ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಚಿತ್ರರಂಗದ ದೊಡ್ಡ ದೊಡ್ಡ ತಾರೆಯರನ್ನು ಕರೆದು ತಂದು, ಕೂರಿಸಿ, ಮುಕ್ತವಾಗಿ ಹರಟುವಂತಹ ಕಾರ್ಯಕ್ರಮ ಇದಾಗಿದೆ.

ಪ್ರೈಮ್ ವಿಡಿಯೊ ಒಟಿಟಿಯ ನಿಖಿಲ್ ಮಧೋಕ್ ಅವರ ಪ್ರಕಾರ ಇದು ಟಾಕ್ ಶೋಗೆ ಹೊಸತನವನ್ನು ತರಲಿದೆ. ಕಾಜೋಲ್ ಹಾಗೂ ಟ್ವಿಂಕಲ್ ಇಬ್ಬರೂ ಭಿನ್ನ ಸಂವೇದನೆಯ ನುರಿತ ಕಲಾವಿದರು. ಇಬ್ಬರೂ ಮುಕ್ತವಾಗಿ, ಬೋಲ್ಡ್ ಎನಿಸುವಂತಹ ಪ್ರಶ್ನೆಗಳನ್ನು ಕೇಳಬಲ್ಲರು. ಅನೌಪಚಾರಿಕ ಮಾತುಕತೆಯಲ್ಲಿ ಹೊರಬರುವ ವಿಷಯಗಳನ್ನು ಎಂಥವರಿಗೂ ನೋಡಲು ಇಷ್ಟ. ಅದನ್ನು ಈ ಇಬ್ಬರೂ ದಕ್ಕಿಸಿಕೊಡಲಿದ್ದಾರೆ.



ಸಿನಿಮಾ ನಿರ್ಮಾಣದ ಕೆಲಸಗಳಲ್ಲಿ ತೊಡಗಿಕೊಂಡಿದ್ದ ಕಾಜೋಲ್ ಮತ್ತೆ ಉತ್ಸಾಹದಿಂದ ಕಾರ್ಯಕ್ರಮದ ಭಾಗವೂ ಆಗಲಿದ್ದಾರೆ. ಅವರಿಗೂ ತಾವು ಮಾತಿಗೆ ಎಳೆಯಲಿರುವ ಅತಿಥಿಗಳ ಕುರಿತು ಉತ್ಸಾಹವಿದೆ. ಓದುವ ಹವ್ಯಾಸ ಇಟ್ಟುಕೊಂಡಿರುವ ಟ್ವಿಂಕಲ್ ಅವರೂ ಕಾಜೋಲ್ ಜೊತೆ ಇರುವುದು ಕಾರ್ಯಕ್ರಮಕ್ಕೆ ಬೋನಸ್ಸು. ■